# ಕರ್ನಾಟಕ ಅರಣ್ಯ ಇಲಾಖೆ

ಸಂಖ್ಯೆ: ಎ7/ಎಲ್‌ಎನ್‌ಡಿ/ಗ್ರೀನ್‌ಕೋ/ಸಿಆರ್- /2020-21

ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ
ಬೆಳಗಾವಿ ವೃತ್ತ, ಬೆಳಗಾವಿ
ದಿನಾಂಕ:21-04-2021

ಇವರಿಗೆ,

ಉಪ ಅರಣ್ಯ ಸಂರಕ್ಷಣಾಧಿಕಾರಿ
ಘಟಪ್ರಭಾ ವಿಭಾಗ,
ಗೋಕಾಕ

ವಿಷಯ: Diversion of 160.40 ha, of forest Land for Construction of 1260 MW Standalone pumped Storage Project being development by M/S Greenko Solar Energy Private Ltd. (GSEPL) Proposal No. FP/KA/HYD/37723/2018 reg.

ಉಲ್ಲೇಖ: OSMFCP ಆನಲೈನ್‌ನಲ್ಲಿ ಸ್ವೀಕೃತವಾದ ದಿನಾಂಕ: 16-04-2021.

** * **

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ OSMFCP ಆನಲೈನ್‌ನಲ್ಲಿ ಸ್ವೀಕೃತವಾದ ಪ್ರಸ್ತಾವನೆಯನ್ನು ಪರಿಶೀಲಿಸಲಾಗಿ, ಈ ಕೆಳಗಿನಂತೆ ನ್ಯೂನ್ಯತೆಗಳು ಕಂಡು ಬಂದಿರುತ್ತವೆ.

1. ಪ್ರಸ್ತಾವನೆಗೆ ಈ ಹಿಂದಿನ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ಶಿಫಾರಸ್ಸು ಮಾಡಲಾದ ಶಿಫಾರಸ್ಸು ಪತ್ರ ಅಪ್‌ಲೋಂಡ್ ಮಾಡಿರುತ್ತಾರೆ. ಆದರೆ ಪ್ರಸಕ್ತ ಕಾರ್ಯನಿರ್ವಹಿಸುತ್ತಿರುವ ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಶಿಫಾರಸ್ಸು ಪತ್ರ ಅಪ್‌ಲೋಡ್ ಮಾಡಿದ್ದು ಇರುವುದಿಲ್ಲ.
2. ಧೂಪದಾಳ ಮತ್ತು ಯಕ್ಕುಂಡಿ ಗ್ರಾಮದ ಗ್ರಾಮಸ್ತರಿಗೆ ಕಾರ್ಲಕಟ್ಟಿ ಗ್ರಾಮದ ಅರಣ್ಯ ಸರ್ವೆ ನಂ.146 ರಲ್ಲಿ ಪುನರವಸತಿ ಸೌಲಭ್ಯಕ್ಕಾಗಿ ಅರಣ್ಯ ಭೂಮಿಯನ್ನು ಬಿಡುಗಡೆ ಮಾಡಿದ ಸರ್ಕಾರಿ ಆದೇಶದ ಪ್ರತಿಗಳು, ಡಿ-ನೋಟಿಫಿಕೇಶನ್ ಪ್ರತಿ ಮತ್ತು ಗ್ರಾಮ ಅರಣ್ಯ ವಹಿಯಲ್ಲಿ ಸದರಿ ಅರಣ್ಯ ಪ್ರದೇಶವನ್ನು ಕಡಿಮೆ ಮಾಡಿರುವ ಬಗ್ಗೆ ದುರಸ್ಥಿ ಪತ್ರ ಸಲ್ಲಿಸಿದ್ದು ಇರುವುದಿಲ್ಲ. ಹಾಗೂ ಕಂದಾಯ ಇಲಾಖೆಯ ಅರಣ್ಯ ಭೂಮಿಗೆ ಸಂಬಂಧಿಸಿದ ಪ್ರದೇಶಗಳಿಗೆ ಆರ್.ಟಿ.ಸಿ. ದಾಖಲಾತಿಗಳಲ್ಲಿ ಧೂಪದಾಳ ಮತ್ತು ಯಕ್ಕುಂಡಿ ಗ್ರಾಮದ ಗ್ರಾಮಸ್ತರ ಕೆಲವು ಹೆಸರಿಗಳು ಸೇರ್ಪಡೆಯಾಗಿದ್ದು, ಈ ಬಗ್ಗೆ ನಿಮ್ಮ ಪರಿಶೀಲನಾ ವರದಿಯಲ್ಲಿ ಸ್ಪಷ್ಟ ಪಡಿಸಿದ್ದು ಇರುವುದಿಲ್ಲ.
3. ಉಪಯೋಗಿ ಸಂಸ್ಥೆಯವರು ಕೋರಿರುವ ಪ್ರದೇಶದಲ್ಲಿ ತೋಳುಗಳು ಇರುವಿಕೆ ಬಗ್ಗೆ ಹಾಗೂ ಅವುಗಳಿಂದ ಮಾನವ ಹಾನಿ ಸಂಭವಿಸದೇ ಇರುವ ಬಗ್ಗೆ ಕೇವಲ ಒಂದು ಸರ್ಕಾರಿ ಆಸ್ಪತ್ರೆಯಿಂದ ವರದಿ ಪಡೆದು ಸಲ್ಲಿಸಿರುತ್ತೀರಿ. ಆದರೆ ಸದರಿ ಪ್ರದೇಶದ ಸುತ್ತಮುತ್ತ ಪ್ರದೇಶಗಳ ಗ್ರಾಮದಲ್ಲಿರುವ ಸರ್ಕಾರಿ ಆಸ್ಪತ್ರೆ, ಖಾಸಗಿ ಆಸ್ಪತ್ರೆ ಹಾಗೂ ಸವದತ್ತಿ ಮತ್ತು ಗೋಕಾಕ ತಾಲ್ಲೂಕಾ ಆಸ್ಪತ್ರೆಗಳಿಂದ ತೋಳುಗಳಿಂದ ಮಾನವ ಪ್ರಾಣಹಾನಿ ಸಂಭವಿಸದೇ ಇರುವ ಬಗ್ಗೆ ಪರಿಶೀಲಿಸಿ ವರದಿ ಪಡೆದು ಸ್ಪಷ್ಟ ಪಡಿಸಿದ್ದು ಇರುವುದಿಲ್ಲ.

ಕಾರಣ, ಈ ಬಗ್ಗೆ ಪ್ರಸ್ತಾವನೆಯನ್ನು ಮರು ಪರಿಶೀಲಿಸಿ OSMFCP ಆನಲೈನ್ ಮುಖಾಂತರ ಕಳುಹಿಸಲು ಸೂಚಿಸಿದೆ.

ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ
ಬೆಳಗಾವಿ ವೃತ್ತ, ಬೆಳಗಾವಿ

GKK DCF_Ltr_A7_21-22 Asha.doc 1